2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**<u>ಎಸ್.ಸಿ.5027/2022</u>**

ದಿ:12.09.2024
ಚಾಸಾ-2 ಪ್ರಾಸಾ-2

| | |
|---|---|
| ಹೆಸರು | : ರಾಘವೇಂದ್ರ |
| ತಂದೆಯ ಹೆಸರು | : ಶಿವರಾಮಯ್ಯ ಟಿ.ಎಸ್ |
| ವಯಸ್ಸು | : 34 |
| ಉದ್ಯೋಗ | : ಐ.ಟಿ.ಉದ್ಯೋಗಿ |
| ವಾಸ | : ಬೆಂಗಳೂರು |

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
<u>ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

ಚಾಸಾ-1 ರವರು ನನಗೆ ಅತ್ತೆಯಾಗಬೇಕು. ಚಾಸಾ-3 ರವರು ಚಾಸಾ-1 ರವರ ತಮ್ಮ. ಚಾಸಾ-4 ಮತ್ತು 5 ರವರು ನನ್ನ ಬಾಮೈದುನರು. ಚಾಸಾ-6 ರವರು ನನ್ನ ಹೆಂಡತಿ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈ ಹಿಂದೆ ನೋಡಿರುತ್ತೇನೆ.

ದಿ:09.05.2020 ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ನಾನು, ಚಾಸಾ-1 ಹಾಗೂ ಚಾಸಾ-3 ರಿಂದ 6 ರವರು ಚಾಸಾ-1 ರವರ ಮನೆಯಲ್ಲಿದ್ದಾಗ, ನ್ಯಾಯಾಲಯದ ಮುಂದಿರುವ ಆರೋಪಿತರು ಹಾಗೂ ಅವರೊಂದಿಗೆ ಸುಮಾರು 15 ಜನರು ಒಂದು ಇನ್ನೋವಾ ಕಾರು ಮತ್ತು ಇತರೆ ಕಾರುಗಳಲ್ಲಿ ನಮ್ಮ ಮನೆಯ ಬಳಿ ಬಂದು ಮನೆಯ ಗೇಟಿನ ಬೀಗವನ್ನು ಒಡೆದು ಒಳಗೆ ಬಂದು ಚಾಸಾ-4 ಕೌಶಿಕ್‌ರವರ ವಿವಾಹವನ್ನು 3 ನೇ ಆರೋಪಿ ಪುಷ್ಪಾರವರೊಂದಿಗೆ ಮಾಡಲು ಚಾಸಾ-4 ರವರನ್ನು ಮನೆಯಿಂದ ಹೊರಗೆ ಕಳುಹಿಸಿಕೊಡುವಂತೆ ಹೇಳಿರುತ್ತಾರೆ. ನಂತರ ಚಾಸಾ-1 ರವರು ಚಾಸಾ-4 ರವರನ್ನು ಹೊರಗೆ ಕಳುಹಿಸಿಕೊಡಲು ನಿರಾಕರಿಸಿರುತ್ತಾರೆ. ಆ ಸಮಯದಲ್ಲಿ 5 ನೇ ಆರೋಪಿಯು

ಚಾಕುವನ್ನು ಹಾಗೂ 4ನೇ ಆರೋಪಿ ಕಬ್ಬಿಣದ ರಾಡು ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಚಾಸಾ-4 ರವರನ್ನು ಹೊರಗೆ ಕಳುಹಿಸಿಕೊಡಲಿಲ್ಲ ಎಂದರೆ ಜೀವಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತಾರೆ. ಆಗ 5ನೇ ಆರೋಪಿ ಕೇಶಮೂರ್ತಿರವರು ನನ್ನ ತಲೆಯ ಭಾಗಕ್ಕೆ ಚಾಕುವಿನಿಂದ ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾನೆ. ನಂತರ ನನ್ನನ್ನು ಎಳೆದಾಡಿ ನಾನು ಧರಿಸಿದ್ದ ಬಟ್ಟೆಗಳನ್ನು ಹರಿದು ಹಾಕಿರುತ್ತಾರೆ. ನಂತರ 4ನೇ ಆರೋಪಿಯು ಕಬ್ಬಿಣದ ರಾಡಿನಿಂದ ಚಾಸಾ-3 ರವರ ತಲೆಯ ಹಿಂಭಾಗಕ್ಕೆ, ಎಡಗೈಗೆ ಹೊಡೆದು ರಕ್ತಗಾಯಪಡಿಸಿರುತ್ತಾರೆ. ನಂತರ ಆರೋಪಿತರು ಚಾಸಾ-3 ರವರಿಗೆ ಕೆಳಗೆ ಬೀಳಿಸಿಕೊಂಡು ಹಲ್ಲೆ ಮಾಡಿರುತ್ತಾರೆ. ನಂತರ ಆರೋಪಿತರು ಚಾಸಾ-1 ಮತ್ತು 3 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುತ್ತಾರೆ ಹಾಗೂ ಚಾಸಾ-1 ರವರ ಬಟ್ಟೆಗಳನ್ನು ಹಿಡಿದು ಎಳೆದಾಡಿರುತ್ತಾರೆ. ನಂತರ ನಾನು, ಚಾಸಾ-1, 3 ಮತ್ತು 4 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ. ಸಾಕ್ಷಿಯು ಆರೋಪಿತರು ಬಂದ ಇನ್ನೋವಾ ಕಾರನ್ನು ಈಗ ತೋರಿಸಿದ ಫೋಟೋ ಮೂಲಕ ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕಪ್ಪು ಬಣ್ಣದ ಟಿಶರ್ಟು, ಒಂದು ಬನಿಯನ್, ಒಂದು ಸ್ಟೀಲ್ ಬೀಗ, ಗಾಜಿನ ಒಡೆದ ಚೂರುಗಳು, ಸ್ಟೀಲ್ ಚಾಕು, ಕಬ್ಬಿಣದ ರಾಡು ಹಾಗೂ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂಒ-1 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ಪೊಲೀಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲು:</u>** ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಂಜಸ ಕಾರಣ ನೀಡದೇ ಇದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5027/2022**

ದಿಃ12.09.2024
ಚಾಸಾ-3 ಪ್ರಾಸಾ-3

ಹೆಸರು : ಲೋಹಿತ್
ತಂದೆಯ ಹೆಸರು : ಸೀತಾರಾಮೇಗೌಡ
ವಯಸ್ಸು : 45
ಉದ್ಯೋಗ : ವ್ಯವಸಾಯ
ವಾಸ : ತೋಟಹಳ್ಳಿ

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ರವರು ನನಗೆ ಅಕ್ಕನಾಗಬೇಕು. ಚಾಸಾ-2 ರವರು ಚಾಸಾ-1 ರವರ ಅಳಿಯ. ಚಾಸಾ-4 ರಿಂದ 6 ರವರು ಚಾಸಾ-1 ರವರ ಮಕ್ಕಳು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈ ಹಿಂದೆ ನೋಡಿರುತ್ತೇನೆ.

ದಿಃ09.05.2020 ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ನಾನು, ಚಾಸಾ-1, 2 ಹಾಗೂ ಚಾಸಾ-4 ರಿಂದ 6 ರವರು ಚಾಸಾ-1 ರವರ ಮನೆಯಲ್ಲಿದ್ದಾಗ, ನ್ಯಾಯಾಲಯದ ಮುಂದಿರುವ ಆರೋಪಿತರು ಒಂದು ಇನ್ನೋವಾ ಕಾರಿನಲ್ಲಿ ಚಾಸಾ-1 ರವರ ಮನೆಯ ಬಳಿ ಬಂದು ಮನೆಯ ಗೇಟಿನ ಬೀಗವನ್ನು ಒಡೆದು ಒಳಗೆ ಬಂದು ಚಾಸಾ-4 ಕೌಶಿಕ್‌ರವರನ್ನು 3 ನೇ ಆರೋಪಿ ಪುಷ್ಪಾರವರೊಂದಿಗೆ ಮದುವೆ ಮಾಡಲು ಚಾಸಾ-4 ರವರನ್ನು ಮನೆಯಿಂದ ಹೊರಗೆ ಕಳುಹಿಸಿಕೊಡುವಂತೆ ಹೇಳಿರುತ್ತಾರೆ. ನಂತರ ಚಾಸಾ-1 ರವರು ಚಾಸಾ-4 ರವರನ್ನು ಹೊರಗೆ ಕಳುಹಿಸಿಕೊಡಲು ನಿರಾಕರಿಸಿರುತ್ತಾರೆ. ಆ ಸಮಯದಲ್ಲಿ 5 ನೇ ಆರೋಪಿ ಕೇಶವ ಮೂರ್ತಿ ಮತ್ತ 4 ನೇ ಆರೋಪಿ ಅಭಿಷೇಕನು

ನನಗೆ ಕಬ್ಬಿಣದ ರಾಡು ಮತ್ತು ಕಲ್ಲುಗಳಿಂದ ತಲೆಯ ಹಿಂಭಾಗಕ್ಕೆ ಹೊಡೆದು ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾರೆ. ನಂತರ ನನ್ನ ಎಡಗೈಗೆ ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾರೆ. ನಂತರ ಆರೋಪಿತರು ನನ್ನನ್ನು ಹಿಡಿದು ಎಳೆದಾಡಿ ಮೈಮೇಲಿದ್ದ ಬನಿಯನ್‌ನ್ನು ಹರಿದು ಹಾಕಿರುತ್ತಾರೆ ಮತ್ತು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರು ಚಾಸಾ-1 ರವರನ್ನು ಹಿಡಿದು ಎಳೆದಾಡಿರುತ್ತಾರೆ. ನಂತರ ಆರೋಪಿತರು ಮನೆಯ ಕಿಟಕಿ ಗಾಜುಗಳನ್ನು ಒಡೆದು ಪುಡಿ ಮಾಡಿರುತ್ತಾರೆ. ಚಾಸಾ-2 ರವರಿಗೆ ಕಬ್ಬಿಣದ ರಾಡಿನಿಂದ ತಲೆಗೆ ಹಲ್ಲೆ ಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಬ್ಬಿಣದ ರಾಡು ಮತ್ತು ಕಲ್ಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂಒ-6 ಮತ್ತು 7 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಒ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಆರೋಪಿತರು ಬಂದ ಇನ್ನೋವಾ ಕಾರನ್ನು ಈಗ ತೋರಿಸಿದ ಫೋಟೋ ಮೂಲಕ ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ಪೊಲೀಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

ಆರೋಪಿ-5 ರವರು ಚಾಸಾ-2 ರವರ ತಲೆಗೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಂಜಸ ಕಾರಣ ನೀಡದೇ ಇದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.